# ನಮ್ಮ ಅನಿಸಿಕೆಗಳು

ನನ್ನ ಹೆಸರು ವಿದ್ಯಾಪತಿ. ಬಿ. ಎಸ್. ನಾನು ಮೊದಲು ಅಕ್ಷರ ಫೌಂಡೇಷನಲ್ಲಿ ಕೆಲಸ ಮಾಡುತ್ತಿದ್ದೆ. ಅರವಿಂದ ಸರ್. ನನಗೆ ಸುಮಿಕ್ಷಾ ಫೌಂಡೇಶನ ಬಗ್ಗೆ ಹೇಳಿದರು ಆಗ ಅವರು ಮಕ್ಕಳ ಬಗ್ಗೆ ಹೇಳುವಾಗ ನನ್ನಗೆ ಮೊದಲು ಬಯ ಆಯಿತು. ನಂತರ ಅರವಿಂದ ಸರ್ ಸಂಧ್ಯಾ ಮೇಡಮ್ ಮತ್ತು ಮಂಜುಳ ಮೇಡಮ್ ಪರಿಚಯ ಮಾಡಿಸಿ. ಅವರು ಮಾಡುವ ಕೆಲಸದ ಬಗ್ಗೆ ನನಗೆ ತಿಳಿಸಿದರು. ಆಗ ನನಗೆ ಸ್ವಲ್ಪ ಬಯ ದೂರವಾಯಿತು. ಸಂಧ್ಯಾ ಮೇಡಮ್ ಮತ್ತು ಅವರ ತಾಯಿಯವರು ಕಾಲೋನಿ ಇರುವ ಮಕ್ಕಳಿಗೆ ಓದಲು ಬರೆಯಲು ಮತ್ತು ಅವರಿಗೆ ಶಾಲೆಗೆ ಹೋಗಲು ಆಗುತ್ತಿಲ್ಲ ಅನ್ನುವ ಕೊರತೆಯನ್ನು ಮಕ್ಕಳು ಮಾಡಬಾರದು ಎಂದು ತಿಳಿದು ಅವರಿಗೆ ಅನುಕೂಲವಾಗಲು ಸುಮಿಕ್ಷಾ ಫೌಂಡೇಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇಲ್ಲಿ ಮಕ್ಕಳಿಗೆ ಓದುವ ಹುಮ್ಮಸನ್ನು ಬೆಳೆಯಲು ಮಕ್ಕಳಿಗೆ ಪುಸ್ತಕದ ಬ್ಯಾಗಗಳನ್ನು ಕೊಟ್ಟರು. ಅದರಲ್ಲಿ ಬರೆಯಲು ಪುಸ್ತಕ ರಬ್ಬರ್, ಪೆನ್ಸಿಲ್ ಡ್ರಾಯಿಂಗ ಪುಸ್ತಕ ಮತ್ತು ಕಲರ್ ಪೆನ್ಸಿಲ್‌ಗಳು ಇದ್ದುವು ಅದನ್ನು ನೋಡಿ ಮಕ್ಕಳಿಗೆ ತುಂಬ ಸಂತೋಷವಾಯಿತು. 18/06/2009 ರಂದು ಕೆಲಸ ಪ್ರಾರಂಭವಾಯಿತು. ನನಗೆ ಮಕ್ಕಳ ಜೊತೆ ಓದಲು ಬರೆಯಲು ಹೇಳಿಕೊಟ್ಟು, ಅವರಿಗೆ ಕಥೆ ಹೇಳುವುದನ್ನು ಅಭ್ಯಾಸ ಮಾಡಿಕೊಂಡೆ. ನಂತರ ಸ್ವಲ್ಪ ದಿನಗಳ ಮೇಲೆ ಕಿಶೋರ್ ಸರ್ ಬರುತ್ತಿದ್ದರು. ಅವರು ಮಕ್ಕಳಿಗೆ ಮ್ಯಾಜಿಕ್‌ನಲ್ಲಿ ಬರುವ ಡ್ರಾಯಿಂಗ್ ತೋರಿಸಿ. ಇದಕ್ಕಿಂತ ಚೆನ್ನಾಗಿ ಬರೆದರೆ ಅದನ್ನು ಪೇಪರನಲ್ಲಿ ಹಾಕಿಸುತ್ತೇನೆ ಎಂದು ಹೇಳಿ ಮಕ್ಕಳಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಇದೇ ರೀತಿ ಮೀರಾ ಮೇಡಮ್ ಕೂಡ ಮಕ್ಕಳಿಗೆ ಗಣಿತದ ಬಗ್ಗೆ ತುಂಬ ಸುಲಭವಾದ ರೀತಿಯಲ್ಲಿ ಮಕ್ಕಳಿಗೆ ತಿಳಿಸುತ್ತಾರೆ. ಶೋಭನಾ ಮೇಡಮ್ ಮಕ್ಕಳಿಗೆ ಆಟ ಮತ್ತು ಪಾಠದ ಬಗ್ಗೆ ಇಂಗ್ಲೀಷ್ ಪಾಠಗಳನ್ನು ಸುಲಭವಾಗಿ ಕನ್ನಡದಲ್ಲಿ ಹೇಳಿ ಕೊಡುತ್ತಾರೆ. ಪ್ರಿಯಂಕ ಮೇಡಂ ಶನಿವಾರ ನಡೆಯುವ ಯೋಗ ಸಮಯದಲ್ಲಿ ತುಂಬ ಶಾಂತ

ಮಾಡುತ್ತಾರೆ. ನಂತರ ಕವೀಂದ್ರ ಸರ್ ತಮ್ಮ ಕ್ಲಾಸಿನಲ್ಲಿ ಕಲಿಸುವ ಮಕ್ಕಳಿಗೆ ಪಾಠಗಳನ್ನು ಮತ್ತು ಅವರಿಗೆ ಹಾಡುಗಳನ್ನು ಹೇಳಿ ಕೊಡುತ್ತಾರೆ. ಇದರಿಂದ ಮಕ್ಕಳಿಗೆ ತುಂಬ ಅನುಕೂಲವಾಗುತ್ತದೆ. ಪಾಠದ ಜೊತೆಗೆ ಸ್ವಾಮಿ ಯೋಗರತ್ನ ಮೇಡಮ್ ಅವರು ವಾರಕ್ಕೆ ಒಂದು ದಿ ಬಂದು ಮಕ್ಕಳಿಗೆ ಯೋಗಾಭ್ಯಾಸವನ್ನು ಮಾಡಿಸುತ್ತಾ ಇದರಿಂದ ಮಕ್ಕಳ ಮೂಳೆಗಳಿಗೆ ರಕ್ತ ಸಂಚಾರ ಸ-ರಾಗವಾಗಿ ಆಗುತ್ತದೆ. ಮಕ್ಕಳ ಶರೀರಕ್ಕೆ ಬೇಕಾದ ತರ ಯೋಗಾಭ್ಯಾಸವನ್ನು ಮಾಡಿಸಿದರೆ ಮಕ್ಕಳು ಬೇಗ ಗುಣವಾಗುತ್ತಾರೆ. ಬಿಂದು ಸ್ವಾಮಿಯವರು ತಿಳುವಳಿಕೆ ಮಕ್ಕಳಿಗೆ ಹೇಳಿ ಕೊಡುತ್ತಾರೆ. ಮಕ್ಕಳ ತಾಯಂದಿರಿಗೂ, ತುಂಬ ಅನುಕೂಲವಾಗಿದೆ. ಅವರಿಗೂ ಆರೋಗ್ಯದ ಬಗ್ಗೆ ಅರಿವಾಗಿದೆ. ಅವರು ದಿನ ಬೆಳಗ್ಗೆ ಎದ್ದು ಮಕ್ಕಳಿಗೆ ಯೋಗ ಮಾಡಿಸುತ್ತಾರೆ. ಇದರಿಂದ ಮಕ್ಕಳಿಗೆ ತುಂಬ ಸಂತೋಷವಾಗುತ್ತದೆ. ಮತ್ತು ಮಕ್ಕಳಿಗೆ ಬೇರೆ ಹಾಡುಗಳನ್ನು ಹೇಳಿಕೊಡುತ್ತಾರೆ. ಸಂಧ್ಯಾ ಮೇಡಮ್ ಮತ್ತು ಮಂಜುಳ ಮೇಡಮ್ ತಿಂಗಳಿಗೆ ಒಂದು ಬಾರಿ ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸಿ ಮಕ್ಕಳ ಮನಸ್ಸನ್ನು ಸಂತೋಷ ಪಡಿಸಿ ಅವರಿಗೆ ಒಂದು ಉಡುಗೊರೆಯನ್ನು ಕೊಡುತ್ತಾರೆ. ಮೊದಲು ಮಕ್ಕಳು ಸರಿಯಾಗಿ ಕ್ಲಾಸಿಗೆ ಬರುತ್ತಿರಲಿಲ್ಲ. ಲಾವಣ್ಯ, ಚೇತನ್, ರಚನಾ, ಸಂಜಯ್ ನಂತರದ ದಿನಗಳಲ್ಲಿ ನಾವು ಮಕ್ಕಳಿಗೆ ತಿಳಿಸಿ ಹೇಳಿದಾಗ ಮಕ್ಕಳು ಕ್ಲಾಸಿಗೆ ಸರಿಯಾಗಿ ಬರಲು ಪ್ರಾರಂಭಿಸಿದರು. ಚೇತನ್ ಅಮ್ಮನ ಹುಡುಗ ಮೊದಲು ಪಾಠ ಹೇಳಿ-ಕೊಡುತ್ತೀವಿ ಕ್ಲಾಸಿಗೆ ಬಾ ಎಂದು ಹೇಳಿದಾಗ ನನಗೆ ಇಷ್ಟಇಲ್ಲ, ನನಗೆ ನಿದ್ದೆ ಬರುತ್ತಿದೆ ಅಂತ ಹೇಳಿ ಕ್ಲಾಸಿಗೆ ಬರುತ್ತಿರಲಿಲ್ಲ. ನಂತ ದಿನಗಳಲ್ಲಿ ಅವನಿಗೆ ನಾವು ನೀನು ಮುಂದೆ ಶಾಲೆಗೆ ಹೋಗಬೇಕು. ಅಲ್ಲಿ ಎಲ್ಲ ಮಕ್ಕಳಂತೆ ನೀನು ಓದಬೇಕು, ಅಥವಾ ನೀನು ಶಾಲೆಗೆ ಹೋದಾಗ ಸರ್ ನಿನ್ನನು ಎದ್ದು ಓದಲು ಅಥವಾ ಬರೆಯಲು ಹೇಳಿದರೆ ಆಗ ನಿನ್ನ ಮನಸ್ಸಿಗೆ ನೋವಾಗುತ್ತದೆ. ಆದ್ದರಿಂದ ನಾವು ನನಗೆ ಯಾವ ರೀತಿಯ